ಅಧ್ಯಕ್ಷರು : ವಿಚಾರಣೆ ಮಾಡಿ ತನಿಖೆ ನಡೆಸಿದರೆ ಆಯಿತು.

ಶ್ರೀ ಎಂ.ಪಿ. ಪ್ರಕಾಶ್ : ನಿಯತಕಾಲಿಕವಾಗಿ ಅವರು ಅದನ್ನು ಪೂರೈಸುವುದರಲ್ಲಿ ವಿಫಲರಾಗಿದ್ದಾರೆ ಎನ್ನುವ ಕಾರಣಕ್ಕಾಗಿ ಮಾನ್ಯ ಸಚಿವರು ಆ ವಿಚಾರವನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ನಿಯತಕಾಲಿಕವಾಗಿ ಆಗಿರುವುದು. 11 ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ಸಂದರ್ಭವಾದಾಗ್ಯೂ ಕೂಡ ಪೌಷ್ಟಿಕ ಆಹಾರಾಂಶಗಳು ಸರಬರಾಜಾಗಿಲ್ಲ ಎನ್ನುವುದಾದರೆ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅತಿವೃಷ್ಟಿಗೊಳಗಾದವರಿಗೆ ಪರಿಹಾರ.

300 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷದ ಮಳೆಗಾಲದಲ್ಲಿ ರಾಜ್ಯದಲ್ಲಿ ಬಂದಂತಹ ಮಳೆ, ನೆರೆಯಿಂದಾಗಿ ಸಂಭವಿಸಿದ ಕೃಷಿ ಹಾನಿ ಎಷ್ಟು?

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಎಕರೆ ಕೃಷಿ ನಾಶವಾಗಿರುತ್ತದೆ? (ಜಿಲ್ಲಾವಾರು ವಿವರ ನೀಡುವುದು)

ಇ) ಇವುಗಳಲ್ಲಿ ಎಷ್ಟು ಸಂತ್ರಸ್ಥ ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿದೆ?

ಈ) ಕೃಷಿ ಹಾನಿಗೊಳಗಾದವರಿಗೆ ನೀಡಲಾಗುತ್ತಿರುವ ಪರಿಹಾರ ಧನವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ರಮೇಶ್.ಸಿ. ಜಿಗಿಜಿಣಗಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಈ ವರ್ಷದ ಮಳೆಗಾಲದಲ್ಲಿ ಮಳೆ, ನೆರೆಯಿಂದಾಗಿ ಸಂಭವಿಸಿದ ಕೃಷಿ ಹಾನಿ ರೂ.172.66 ಲಕ್ಷಗಳಾಗಿವೆ.

ಆ) ರಾಜ್ಯದಲ್ಲಿ ಒಟ್ಟು 7782:20 ಎಕರೆ ಕೃಷಿಬೆಳೆ ನಾಶವಾಗಿರುತ್ತದೆ? ಜಿಲ್ಲಾವಾರು ವಿವರ ಕೆಳಕಂಡಂತಿದೆ-

1.	ದಕ್ಷಿಣ ಕನ್ನಡ	:	6257.28 ಎಕರೆಗಳು
2.	ಚಿಕ್ಕಮಗಳೂರು	:	40.00 ಎಕರೆಗಳು
3.	ಗುಲ್ಬರ್ಗಾ	:	104.00 ಎಕರೆಗಳು
4.	ಶಿವಮೊಗ್ಗ	:	1364.00 ಎಕರೆಗಳು
5.	ಉತ್ತರ ಕನ್ನಡ	:	16.32 ಎಕರೆಗಳು
	ಒಟ್ಟು	:	**7782.20 ಎಕರೆಗಳು**

ಇ) ಈವರೆವಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3830, ಶಿವಮೊಗ್ಗದಲ್ಲಿ 122 ಸಂತ್ರಸ್ಥ ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿದೆ.

ಈ) ನಿಯಮಾನುಸ್ಕಾರ ಪ್ರತಿ ಹೆಕ್ಟೇರಿಗೆ ರೂ.500 ರಂತೆ ಕುಟುಂಬವೊಂದಕ್ಕೆ ಗರಿಷ್ಠ ರೂ. 2000 ಗಳವರೆಗೆ ಪರಿಹಾರ ನೀಡಲು ಅವಕಾಶವಿದೆ. ಆದರೆ, ಕುಟುಂಬದ ವಾರ್ಷಿಕ ವರಮಾನ ರೂ. 18000ಗಳನ್ನು ಮೀರಿದ್ದಲ್ಲಿ ಹಾಗೂ ಸದರಿ ರೈತ ಕುಟುಂಬವು ಬೆಳೆ ವಿಮೆ ಹೊಂದಿದ್ದಲ್ಲಿ ಪರಿಹಾರಕ್ಕೆ ಅರ್ಹತೆ ಹೊಂದಿರುವುದಿಲ್ಲ. ಹಾಗೆಯೇ ತೋಟಗಾರಿಕೆ ಬೆಳೆ ಹಾನಿಯಾದಲ್ಲಿ ಪ್ರತಿ ಮರಕ್ಕೆ ರೂ.100 ಹಾಗೂ ಪ್ರತಿ ಗಿಡಕ್ಕೆ ರೂ.50-00 ರಂತೆ ಗರಿಷ್ಠ ಕುಟುಂಬವೊಂದಕ್ಕೆ ರೂ.2000ಗಳವರೆಗೆ ಪರಿಹಾರ ನೀಡಲು ಅವಕಾಶವಿದೆ.

ಶ್ರೀ ವಸಂತ. ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಈ ವರ್ಷ ಕರ್ನಾಟಕ ರಾಜ್ಯದಲ್ಲಿ ಭಾರಿ ಮಳೆಯಿಂದ ಮತ್ತು ನೆರೆಯಿಂದ ತೊಂದರೆಯಾಗಿದೆ. ಉತ್ತರದಲ್ಲಿ ಹೀಗೆದೆ. "ದಕ್ಷಿಣ ಕನ್ನಡ ಜಿಲ್ಲೆ, ಚಿಕ್ಕಮಗಳೂರು, ಗುಲ್ಬರ್ಗ, ಮತ್ತು ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 7782 ಹೆಕ್ಟೇರ್ ಭೂಮಿಯಲ್ಲಿ ಕೃಷಿ ನಾಶವಾಗಿದೆ". ಅದೇ ರೀತಿ ಸುಮಾರು 172 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಒಂದು ಉದಾಹರಣೆ ನಾನು ಹೇಳುತ್ತಿದ್ದೇನೆ, ಈ ಉತ್ತರ ಸ್ವಲ್ಪ ಸರಿ ಇಲ್ಲ ಎಂದು ನನಗೆ ಕಾಣಿಸುತ್ತದೆ. ನಮ್ಮ ಉಡುಪಿ ತಾಲ್ಲೂಕಿನಲ್ಲಿ 81 ಗ್ರಾಮಗಳ ಸುಮಾರು ಒಂದು ಕೋಟಿ ಆರು ಲಕ್ಷ ರೂಪಾಯಿಗಳ ನಷ್ಟವಾಗಿದೆ. ಸುಮಾರು 1777 ಹೆಕ್ಟೇರ್ ಭೂಮಿಯಲ್ಲಿ ಕೃಷಿ ನಾಶವಾಗಿದೆ. ಅದೇ ರೀತಿಯಲ್ಲಿ ತಾವು ಇದನ್ನು ಕರೆಕ್ಟ್ ಆಗಿ ಪುನಃ ಪರಿಶೀಲನೆ ಮಾಡಿ ಯಾವ ಯಾವ ಭಾಗದಲ್ಲಿ ಎಷ್ಟು ಕೃಷಿ ಭೂಮಿ ನಷ್ಟವಾಗಿದೆ ಮತ್ತು ಯಾವ ರೀತಿಯಲ್ಲಿ ತಾವು ಪರಿಹಾರ ಕೊಟ್ಟಿದ್ದೀರಿ ಎನ್ನುವುದನ್ನು ಹೇಳಬೇಕು. ಮತ್ತು ಪರಿಹಾರದ ಬಗ್ಗೆ ಮತ್ತೊಂದು ಕೇಳುತ್ತಿದ್ದೇನೆ ಒಂದು ಹೆಕ್ಟೇರ್ ಭೂಮಿಯಲ್ಲಿ ಕೃಷಿನಾಶವಾಗಿದ್ದರೆ ಅದಕ್ಕೆ 500 ರೂಪಾಯಿಗಳ ಪರಿಹಾರವೆಂದು ಕೊಡುತ್ತಿದ್ದಾರೆ. ಅದನ್ನು ಕನಿಷ್ಟಪಕ್ಷ ಒಂದು ಹೆಕ್ಟೇರ್‌ಗೆ ಐದು ಸಾವಿರ ರೂಪಾಯಿಗಳಾದರೂ ಪರಿಹಾರ ಕೊಡಬೇಕಾಗಿ ನಾನು ಮಾನ್ಯ ಮಂತ್ರಿಗಳಿಗೆ ಹೆಚ್ಚಿನ ರೀತಿಯಲ್ಲಿ ಶಾಸಕರ ಸಹಿ ಮಾಡಿಸಿ ಮೊನ್ನೆ ದಿನಾಂಕ 29-7-1997ಕ್ಕ ಮನವಿ ಕೊಟ್ಟಿದ್ದೇನೆ. ಅದನ್ನು ತಾವು ಪರಿಗಣಿಸಬೇಕಾಗುತ್ತದೆ. ಒಂದು ವೇಳೆ ರಾಜ್ಯ ಸರ್ಕಾರ ಕೊಡದಿದ್ದರೆ ಕೇಂದ್ರ ಸರ್ಕಾರವನ್ನು ಕೇಳಿಕೊಂಡು ತಾವು ಅದನ್ನು ಮಾಡಬೇಕು ಮತ್ತು ಈಗಾಗಲೇ ಮಳೆಯಿಂದ ಮತ್ತು ನೆರೆಯಿಂದ ಕೆಲವು ಜನರು ಕೊಚ್ಚಿಕೊಂಡು ಹೋಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 22 ಜನರು ಕೊಚ್ಚಿಕೊಂಡು ಹೋಗಿದ್ದಾರೆ. ಅವರೆಲ್ಲರಿಗೂ ಪರಿಹಾರ ಕೊಡುವ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಮತ್ತು ಕೆಲವು ರಸ್ತೆಗಳ ಪಂಚಾಯತಿ ರಸ್ತೆಗಳು ಇರಬಹುದು, ಜಿಲ್ಲಾ ಪಂಚಾಯಿತಿ ರಸ್ತೆಗಳು ಇರಬಹುದು, ಅದು ವೆಂಟೆಡ್ ಡ್ಯಾಮ್ಸ್ ಇರಬಹುದು, ಕೃಷಿ ಭೂಮಿ ಇರಬಹುದು. ಮರಳು ಬಂದು ತೊಂದರೆಯಾಗಿದೆ. ಇದನ್ನೆಲ್ಲಾ ಜಿಲ್ಲಾವಾರು ಏನು ಕೊಟ್ಟಿದ್ದೀರಿ, ಅಂದರೆ ದಕ್ಷಿಣ ಕನ್ನಡ ಜಿಲ್ಲೆ, ಗುಲ್ಬರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಎಲ್ಲಾ ಜಿಲ್ಲೆಗಳಲ್ಲಿ ಸರಿಯಾಗಿ ಪರಿಶೀಲನೆ ಮಾಡಿ ಈ ಕಾರ್ಯಕ್ರಮವನ್ನು

ಆದಷ್ಟು ಬೇಗ ತುರ್ತಾಗಿ ಈ ವರ್ಷದಲ್ಲಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಈವರೆಗೆ ಸುಮಾರು ಮೂರು ಕೋಟಿ ತೊಂಭತ್ತಾರು ಲಕ್ಷ ರೂಪಾಯಿ ಹಣವನ್ನು ಫ್ಲಡ್ ಡ್ಯಾಮೇಜ್ ಸಲುವಾಗಿ ಸರ್ಕಾರ ಬಿಡುಗಡೆ ಮಾಡಿದೆ. ಆದರೆ ಸಾಲಿಯಾನರವರು ನಮ್ಮಲ್ಲಿ ಜಾಸ್ತಿ ಹಾನಿಯಾಗಿದೆ, ಉತ್ತರ ಸರಿಯಿಲ್ಲ ಎಂದು ಹೇಳಿದ್ದಾರೆ. ಬೇಕಾದರೆ ಇನ್ನೊಂದು ಸಲ ನಾನು ಡೆಪ್ಯುಟಿ ಕಮಿಷನರ್‌ರವರಿಂದ ದಕ್ಷಿಣ ಕನ್ನಡದ ವರದಿಯನ್ನು ತಿರಿಸಿಕೊಂಡು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಆದರೆ ಪರಿಹಾರ ಕೊಡುವುದು ಒಂದು ಹೆಕ್ಟೇರ್‌ಗೆ 500 ರೂಪಾಯಿ, ಇದು ಬಹಳ ಕಡಿಮೆಯಾಗುತ್ತದೆಂದು ಹೇಳಿದ್ದಾರೆ ಇದು ಕೇಂದ್ರ ಸರ್ಕಾರದ ಕಾನೂನಿನ ವ್ಯಾಪ್ತಿಯಲ್ಲಿ ಬರುವುದರಿಂದ ಈಗಾಗಲೇ ಒಂದು ಪತ್ರವನ್ನು ಕೂಡ ನಾನು ಬರೆದಿದ್ದೇನೆ. ಇದು ಬಹಳ ಕಡಿಮೆಯಾಗುತ್ತದೆ. ಈ ನ್ಯಾಚುರಲ್ ಕೆಲಾಮಿಟೀಸ್‌ನಲ್ಲಿ ತೊಂದರೆಯಾದ ರೈತರಿಗೆ ಹೆಚ್ಚಿಗೆ ಹಣ ಕೊಡಬೇಕು ಎಂದು ಹೇಳಿ ನಾವು ಸರ್ಕಾರದವರು ಹಿಂದೆ ಪತ್ರವನ್ನು ಬರೆದಿದ್ದೇವೆ. ಇನ್ನೂ ಒಂದು ಸಲ ಬೇಕಾದರೆ ನಾನು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯುತ್ತೇನೆ ಎಂದು ನಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಇಲ್ಲಿ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ 20 ನೇ ಪ್ರಶ್ನೆಗಳ ಪಟ್ಟಿಯಲ್ಲಿರುವ ಒಟ್ಟು 68 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯೆ

1593 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಡತನದಲ್ಲಿರುವ ಗರ್ಭಿಣಿ ಸ್ತ್ರೀಯರಿಗೆ ಸರ್ಕಾರದಿಂದ ಹೆರಿಗೆ ಭತ್ಯೆ ನೀಡುವ ಯೋಜನೆಯು ರದ್ದಾಗಿದೆಯೆ?

ಆ) ಈ ಯೋಜನೆ ಜಾರಿಯಲ್ಲಿದ್ದರೆ ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳ ಫಲಾನುಭಾವಿಗಳಿಗೆ ಎಷ್ಟು ಸಮಯದಿಂದ ಹಣ ಪಾವತಿಸಿರುವುದಿಲ್ಲ.

ಇ) ಹೆರಿಗೆ ಭತ್ಯೆಗಾಗಿ ಈ ತಾಲ್ಲೂಕುಗಳಲ್ಲಿ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು?